ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 09-08-2023 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಆರ್ ಡಿ ನ್ಯಾಯವಾದಿರವರಿಂದಃ

ಈ ದಾವೆಯನ್ನು ನಾನು ಮೂಲತಃ ಪ್ರತಿವಾದಿ ಹಾಗೂ ನಗರಸಭೆ ವಿರುದ್ಧ ಖಾಯಂ ಮನಾಯಿ ಹುಕುಂ ಕೋರಿ ಸಲ್ಲಿಸಿರುತ್ತೇನೆ ಎಂದರೆ ಸರಿ . ಸದರಿ ದಾವೆ ಹೂಡುವ ಮೊದಲು ನಗರಸಭೆಯವರು ನಾನು ಅನುಮೊದಿತ ವಿನ್ಯಾಸ ನಕ್ಷೆಯನ್ನು ಉಲ್ಲಂಘನೆ ಮಾಡಿ ಕಟ್ಟಡವನ್ನು ನಿರ್ಮಾಣ ಮಾಡಿರುತ್ತೇನೆ ಎಂದು , ನಗರಸಭೆ ಕಾನೂನಿನ ಉಲ್ಲಂಘನೆ ಮಾಡಿದ ಬಾಬ್ತು ನೋಟೀಸ ನೀಡಿರುತ್ತಾರೆ ಎಂದರೆ ಸರಿಯಲ್ಲ. ನೋಟೀಸ್ ನೀಡಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾನು ದಾವೆ ಸಲ್ಲಿಸಿದ ನಂತರ ನೋಟೀಸ್ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಈ ದಾವೆಯನ್ನು ಹೂಡುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಅರ್ಜಿಯ ಮೇರೆಗೆ ನಗರಸಭೆಯವರು ಆತನೊಂದಿಗೆ ಮಿಲಾಫಿಯಾಗಿಕೊಂಡು ನನಗೆ ತೊಂದರೆ ಕೊಡುತ್ತಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ನಗರಸಭೆಯರು ನಾನು ಉಲ್ಲಂಘನೆ ಮಾಡಿರುವ ಬಗ್ಗೆ ನೋಟೀಸ ನೀಡಿರುತ್ತಾರೆ ಎಂದರೆ ಸರಿ . ನಗರಸಭೆಯವರು ನಮ್ಮ ಇಮಾರತ್ತನ್ನು ಕಾನೂನಿನ ಪ್ರಕಾರ ಕಟ್ಟದೇ ಇರುವ ಕಾರಣ ಅಂದರೆ set back ಇಲ್ಲ ಎಂದು ಸ್ವಲ್ಪ ಪ್ರಮಾಣದ ಕಟ್ಟಡವನ್ನು ಕೆಡವಿರುತ್ತಾರೆ ಎಂದರೆ ಸರಿ. ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಪ್ರತಿವಾದಿಯು ಸಲ್ಲಿಸಿದ ರಿಟ್ ಅರ್ಜಿಯಲ್ಲಿ ನಾನು ಹಾಜರಾಗಿ ಕಾನೂನು ಬಾಹಿರವಾಗಿ ನಿರ್ಮಿಸಿದ ಕಟ್ಟಡದ ಅಂಶವನ್ನು ಕೆಡವುತ್ತೇನೆ ಎಂದು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿ. ನಂತರ ನಾನು ಸರ್ವೆ ಅಧಿಕಾರಿಗಳೊಂದಿಗೆ ಮಿಲಾಫಿಯಾಗಿಕೊಂಡು, ತಾನು ಅತಿಕ್ರಮಣ ಮಾಡಿರುವುದಿಲ್ಲ ಎಂದು ತೋರಿಸುವ ಉದ್ದೇಶದಿಂದ ದಾವಾ ಜಮೀನಿನ ಸರ್ವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಕಾಶೆಯ ಆಧಾರದ ಮೇಲೆ 1 ನೇ ಪ್ರತಿವಾದಿಯು ಕಟ್ಟಿದ ಆವರಣ ಗೋಡೆಯನ್ನು 2 ಆಣೆ ಅತಿಕ್ರಮಣ ಮಾಡಿರುತ್ತಾರೆ ಎಂದು ಪರಿಗಣಿಸಿ ಅದನ್ನು ಕೆಡವಲು ಆದೇಶ ಮಾಡಬೇಕು ಎಂದು ನ್ಯಾಯಾಲಯದಲ್ಲಿ ನನ್ನ ಮೂಲದಾವೆಯನ್ನು ತಿದ್ದುಪಡಿ ಮಾಡಿರುತ್ತೇನೆ ಎಂದರೆ ಸರಿ . ದಾವಾಸ್ತಿಯನ್ನು ಖರೀದಿ ಮಾಡಲು 11 ಇ ನಕ್ಷೆಯನ್ನು ಪಡೆದುಕೊಂಡು ಕ್ರಯ ದಸ್ತಾವೇಜನೊಂದಿಗೆ ಲಗತ್ತಿಸಿ ನೊಂದಾಯಿಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಖರೀದಿ ಪತ್ರ ಮತ್ತು ಅದಕ್ಕೆ ಲಗತ್ತಿಸಿದ ನಕಾಶೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಕ್ರಯದಸ್ತವೇಜಿಗೆ ಲಗತ್ತಿಸಿದ 11 ಇ ನಕಾಶೆ ಮತ್ತು ಸರ್ವೆಯರ್ ಮೂಲಕ ತಯಾರು ಮಾಡಿದ ನಕಾಶೆ ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ದಸ್ತಾವೇಜು

ಮತ್ತು ಅದಕ್ಕೆ ಲಗತ್ತಿಸಿದ ನಕಾಶೆ ಹಾಜರುಪಡಿಸಿದರೆ ಸತ್ಯ ಸಂಗತಿ ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎನ್ನುವ ಉದ್ದೇಶದಿಂದ ಕ್ರಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನನಗೆ ಸದರಿ ಖರೀದಿ ಪತ್ರ ಹಾಗೂ ಅದಕ್ಕೆ ಲಗತ್ತಿಸಿದ ನಕ್ಷೆಯ ಆಧಾರದಲ್ಲಿ ಹಕ್ಕು ಪ್ರಾಪ್ತವಾಗಿರುತ್ತದೆ ಎಂದರೆ ಸರಿ. ಕ್ರಯ ದಸ್ತು ಹೊರತುಪಡಿಸಿ ಬೇರೇ ಯಾವುದೇ ದಾಖಲೆಗಳ ಆಧಾರದಿಂದ ದಾವಾಸ್ತಿಯ ವಿಸ್ತೀರ್ಣದ ಮೇಲೆ ಹಕ್ಕನ್ನು ಸಾಧಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನನಗೆ ಯಾವುದೇ ಅಧಿಕಾರ ಇಲ್ಲದಿದ್ದರೂ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ 629 ರಲ್ಲಿ ಒಟ್ಟು 8 ಹಿಸ್ಸೆಗಳಿರುತ್ತವೆ. ಸದರಿ ಮೂಲ ಸರ್ವೆ ನಂಬರನ ಕ್ಷೇತ್ರ 25 ಗುಂಟೆ ಇರುತ್ತದೆ. ಸದರಿ ನನ್ನ ಕ್ರಯ ದಸ್ತವೇಜು ಆದ ಸಮಯಕ್ಕೆ ನಾನು ಖರೀದಿ ಮಾಡಿದ ಆಸ್ತಿಗೆ ಮಾತ್ರ ಕಂದಾಯ ದಾಖಲೆಗಳಲ್ಲಿ ಪೋಡಿ ಆಗಿ ಹಿಸ್ಸಾ ಆಗಿರುತ್ತದೆ. ಉಳಿದ ಕ್ಷೇತ್ರ ಆ ಸಮಯದಲ್ಲಿ ಹಿಸ್ಸೆ ಆಗಿರುವುದಿಲ್ಲ. ಪ್ರತಿವಾದಿ ಮತ್ತು ಅವರ ಸಹೋದರ ಜಮೀನು ಖರೀದಿ ಮಾಡುವ ಸಮಯದಲ್ಲಿ 11 ಇ ನಕಾಶೆ ಪಡೆದುಕೊಂಡು, ದಿಃ 04-08-2008 ರಂದು ತಮ್ಮ ಹೆಸರಿಗೆ ಖರೀದಿ ದಸ್ತವೇಜನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 03-08-2008 ರಂದು ಸದರಿ 11 ಇ ನಕಾಶೆ ಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನಿನ ಒಟ್ಟು 25 ಗುಂಟೆಯಲ್ಲಿ ಹಿಸ್ಸಾ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. 2010 ರಲ್ಲಿ ಸರ್ವೆ ಇಲಾಖೆಯಿಂದ ಕಾನೂನಿನ ಪ್ರಕಾರ ಎಲ್ಲಾ ಕಬ್ಜಾದಾರರುಗಳ ಕ್ಷೇತ್ರ ದಲ್ಲಿ ಮೂಲ ಸರ್ವೆ ನಂ. 629/2ಬ ರಲ್ಲಿ ಫೋಟ ಹಿಸ್ಸೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಫೋಟ್ ಹಿಸ್ಸೆ ನಕಾಶೆ ಪ್ರಕಾರ ಮೂಲ ಸರ್ವೆ ನಂ. 629/2ಬದಲ್ಲಿ ಒಟ್ಟು 8 ಹಿಸ್ಸೆ 629/2ಬ 1 ರಿಂದ 629/2ಬ 8 ರಂತೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ನಾನು ದಾವಾಸ್ತಿಯನ್ನು ಖರೀದಿ ಮಾಡಿದ ನಂತರ ಫೋಟ್ ಹಿಸ್ಸೆ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಸರ್ವೆ ನಂ. 629/2ಬ 4ರ ಪಶ್ಚಿಮದಲ್ಲಿ ರಸ್ತೆಗಾಗಿ ಪೂರ್ತಿ ಹಿಸ್ಸಾದ ಕ್ಷೇತ್ರವನ್ನು ಪ್ರತ್ಯೇಕವಾಗಿ ಮೀಸಲಿಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗಲೂ ಸಹ ಪ್ರತಿವಾದಿ ಮತ್ತು ಉಳಿದ ಖರೀದಿದಾರರು ಸದರಿ ರಸ್ತೆಯ ಮೂಲಕವೇ ತಮ್ಮ ತಮ್ಮ ಜಮೀನಿಗೆ ಸಂಪರ್ಕಿಸುತ್ತಾರೆ ಎಂದರೆ ಸರಿ. ಸಾಕ್ಷಿಗೆ ಕ್ರಯ ದಸ್ತನ್ನು ತೋರಿಸಲಾಗಿ ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು, ಸದರಿ ನಿ.ಡಿ-1ರಲ್ಲಿ ಲಗತ್ತಿಸಿದ ನಕಾಶೆಯಲ್ಲಿ ಕಾಣಿಸಿದ ಹಿಸ್ಸಾ 629/2ಬ 4 ರಲ್ಲಿ ಕಾಣುವ ರಸ್ತೆಯನ್ನು ಅತಿಕ್ರಮಣ ಮಾಡಿರುವುದು ಕಾಣಿಸಿರುತ್ತಾರೆ ಎಂದರೆ ಸರಿಯಲ್ಲ. ನಿ,ಡಿ-1ಕ್ಕೆ ಲಗತ್ತಿಸಿದ ನಕಾಶೆ ಮತ್ತು ಪ್ರತಿವಾದಿಯ ಕ್ರಯದಸ್ತಿಗೆ ಲಗತ್ತಿಸಿದ ನಕಾಶೆ ತಪ್ಪಾಗಿರುತ್ತದೆ ಎಂದು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ



ಎಂದರೆ ಸರಿ. ಫೋಟ್ ಹಿಸ್ಸಾ ಸರ್ವೆ ನಕಾಶೆಯನ್ನು ಈ ವರೆಗೂ ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ಹೂಡಿದ ನಂತರ ಒರ್ವ ಜೋನ್ ಡಿಸ್ವೆಲ್ವಾ ಇವರು ಮೂಲದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿಯವರು ನಾವು ಜೋನ್ ಡಿಸ್ವೆಲ್ವಾ ಇವರಿಗೆ ಜಮೀನನ್ನು ಅತಿಕ್ರಮಣ ಮಾಡಿ, ಕಟ್ಟಡ ನಿರ್ಮಾಣ ಮಾಡಿದ್ದು ಅದನ್ನು ತೆರವುಗೊಳಿಸಬೇಕು ಎಂದು ಮನಾಯಿ ಹುಕುಂ ದಾವೆ ಮಾಡಿರುತ್ತಾರೆ ಎಂದರೆ ಸರಿ.

ಸದರಿ ದಾವೆಯಲ್ಲಿ ಆ ದಾವೆಯ ವಾದಿಯರು ಸರ್ವೆ ಮಾಡಬೇಕು ಎಂದು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿ ಆ ಮೂಲಕ ಕೊರ್ಟ ಕಮೀಷನರ್ ರವರನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ . ಸದರಿ ಪ್ರಕರಣದಲ್ಲಿ ಪ್ರತಿವಾದಿ ಪಕ್ಷಗಾರರಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ ಪ್ರತಿವಾದಿಗೆ ಸಂಬಂದಪಟ್ಟ ಜಮೀನಿನಲ್ಲಿ ನನ್ನ ದಾವಾ ಜಮೀನು ಅತಿಕ್ರಮಣ ಆಗಿರುತ್ತದೆ ಎಂದು ಒಂದು ಸುಳ್ಳು ವರದಿ ಹಾಕಿಕೊಂಡಿರುತ್ತೆನೆ ಎಂದರೆ ಸರಿಯಲ್ಲ. ಆ ವೇಳೆಗೆ ಸದರಿ ದಾವೆಯಲ್ಲಿ ಕೋರ್ಟ ಕಮೀಷನರ್ ತನ್ನ ಕೆಲಸವನ್ನು ನಿರ್ವಹಿಸುವ ಪೂರ್ವದಲ್ಲಿ ಕಮೀಷನರ್ ಆಗಲಿ ಅಥವಾ ನ್ಯಾಯಾಲಯವಾಗಲಿ ಈ ದಾವೆಯ 1 ನೇ ಪ್ರತಿವಾದಿಗೆ ನೋಟೀಸ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸದರಿ ನಿ.ಪಿ–8 ರಲ್ಲಿ ಪಕ್ಷಗಾರರು ಇಲ್ಲದೇ ಇರುವುದರಿಂದ ಆ ನಕ್ಷೆ ಅವರ ಹಕ್ಕಿಗೆ ಭಾದಿಸುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ–8 ರ ಆಧಾರದ ಮೇಲೆ 2 ಆಣೆ ಜಾಗವನ್ನು ನನ್ನ ಜಮೀನಿನಲ್ಲಿ ಅತಿಕ್ರಮಣ ಮಾಡಿರುತ್ತಾನೆ ಎಂದು ಆಧರಿಸುತ್ತಿದ್ದೆನೆ ಎಂದರೆ ಸರಿ . ನಿ.ಪಿ–8 ನಕಾಶೆ ಆಧಾರದ ಮೇಲೆ 2 ಆಣೆ ಜಮೀನನ್ನು 1 ನೇ ಪ್ರತಿವಾದಿ ನನ್ನ ಜಮೀನಿನಲ್ಲಿ ಅತಿಕ್ರಮಣ ಮಾಡಿದ್ದಾನೆ ಎಂದು ಸಾಧಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಇವರನ್ನು ನ್ಯಾಯಾಲಯವು ಕೋರ್ಟ ಕಮೀಷನರ್ ಎಂದು ನೇಮಿಸಿದ್ದರೂ ಒರ್ವ ಎಸ್ ಎಸ್ ಶೆಟ್ಟಿ ಎನ್ನುವ ತಾಲೂಕ ಭೂಮಾಪಕರು ಕಾರವಾರ ಇವರು ಕಮೀಷನರ್ ಕೆಲಸವನ್ನು ನಿರ್ವಹಿಸಿ ನಕ್ಷೆ ತಯಾರಿಸಿದ್ದರಿಂದ ಅದು ಕಾನೂನು ಅಡಿಯಲ್ಲಿ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆಯರ್ ಖುಣ ಕಲ್ಲುಗಳ ಆಧಾರದ ಮೇಲೆ ತಯಾರಿಸದೇ ಕೆವಲ ವೈವಾಟಿ ಮತ್ತು ಕಾಲ್ಪನಿಕವಾಗಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವೈವಾಟಿ ಪ್ರಕಾರ ಗಡಿಯನ್ನು ಸದರಿ ನಿ.ಪಿ–8 ರಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ನಿ.ಪಿ–8 ರ ಆಧಾರದ ಮೇಲೆ ಭೂದಾಖಲೆಗಳ ಕಚೇರಿಗೆ ಹದ್ ಬಸ್ತ ಕೊಡುವ ಸಲುವಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿ ಆಧಾರದಂತೆ ಸುಳ್ಳು ನಕಾಶೆಯನ್ನು 2 ಆಣೆ ಜಮೀನನ್ನು ಪ್ರತಿವಾದಿ ಅತಿಕ್ರಮಣ ಮಾಡಿರುತ್ತಾರೆ ಎಂದು ಕಾಣಿಸಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಕಾಶೆ ಮಾಡುವಾಗ ನಮ್ಮ ಜಮೀನಿನ ಅಳತೆ ಮಾತ್ರ ಮಾಡಿದ್ದು,



ಉಳಿದ ಹಿಸ್ಸಾಗಳ ಕ್ಷೇತ್ರವನ್ನು ಮತ್ತು 1 ನೇ ಪ್ರತಿವಾದಿಯ ಜಮೀನಿನ ಕ್ಷೇತ್ರ ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಕಾಶೆಯನ್ನು ಹಾಜರುಮಾಡದೇ ಇದ್ದರೂ ಸಹ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಹದ್ದುಬಸ್ತಗೆ ಸಲ್ಲಿಸಿದ ಅರ್ಜಿಯ ಆಧಾರದ ಮೇಲಿನ ನಕಾಶೆಯನ್ನು ಸಹ ಸರ್ವೆ ಅಧಿಕಾರಿಗಳೊಂದಿಗೆ ಸೇರಿಕೊಂಡು ನನಗೆ ಬೇಕಾದ ರೀತಿಯಲ್ಲಿ ವೈವಾಟಿ ಖುಣಗಳ ಆಧಾರದ ಮೇಲೆ ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹದಬಸ್ತ ನಕಾಶೆಯನ್ನು ತಯಾರಿಸುವಾಗ ಖಾಯಂ ಖುಣಗಳು ಸ್ಥಳದಲ್ಲಿ ಇಲ್ಲದೇ ಇರುವುದರಿಂದ ನನಗೆ ಬೇಕಾದ ಹಾಗೆ ನಕಾಶೆಯನ್ನು ಸೃಷ್ಟಿಸಿಕೊಂಡಿರುತ್ತೆನೆ ಎಂದರೆ ಸರಿಯಲ್ಲ. ಸದರಿ ನಕಾಶೆಯನ್ನು ತಯಾರಿಸುವ ಕಾಲಕ್ಕೆ ಜಮೀನಿನ ಅಕ್ಕಪಕ್ಕದ ಮಾಲೀಕರಿಗೆ ನೋಟಿಸ್ ಕೊಡದೆ ಸರ್ವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ದೃಢಿಕೃತ ನಕಲುಗಳನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನ್ಯಾಯಾಲಯದಲ್ಲಿ ಅದನ್ನು ಪುರಾವೆ ಮಾಡಲು ತಯಾರಿರುತ್ತೀರಾ? ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ಸ್ವತಃ ನಾನು ಹದ್ದುಬಸ್ತಗೆ ಅರ್ಜಿಯನ್ನು ಹಾಕಿದ್ದು, ಸರ್ವೆ ಮಾಡುವ ಪೂರ್ವದಲ್ಲಿ ಕಂದಾಯ ಇಲಾಖೆಯವರು ನನ್ನ ಜಮೀನಿನ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ ನೋಟೀಸ ನೀಡಿರುತ್ತಾರೆ ಆದರೆ ನನ್ನಲ್ಲಿ ಅವುಗಳು ಇರುವುದಿಲ್ಲ. ಕಂದಾಯ ಇಲಾಖೆಯ ಅಧಿಕಾರಿಗಳು ಅಂತಹ ಯಾವುದೆ ಮೊಜಣಿ ನೋಟೀಸನ್ನು 1 ನೇ ಪ್ರತಿವಾದಿ ಮತ್ತು ನನ್ನ ಜಮೀನಿಗೆ ತಾಗಿಕೊಂಡಿರುವ ಜಮೀನಿನ ಮಾಲೀಕರಿಗೆ ನೀಡದೇ ಇದ್ದರೂ ಸಹಿತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ನ್ಯಾಯವಾದಿರವರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**